ಜಿಲ್ಲಾ ಪಂಚಾಯತ್ ಮೈಸೂರು

"ಸಂಜೀವಿನಿ"–ಕೆಎಸ್ಆರ್ಎಲ್ಪಿಎಸ್

ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ

(ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

ಪ್ರಕಟಣೆ ಸಂಖ್ಯೆ: ಡಿ.ಆರ್.ಡಿ.ಎ.2/ಎನ್.ಆರ್.ಎಲ್.ಎಂ/ ಗು.ಆ.ಸಿ.ನೇ/44/2017–18: ದಿನಾಂಕ.12.02.2018

ಡೇ–ಎನ್.ಆರ್.ಎಲ್.ಎಂ. ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕಗಳಲ್ಲಿ ಖಾಲಿ ಇರುವ ಗುತ್ತಿಗೆ ಆಧಾರದಲ್ಲಿ ವಿವಿಧ ಹುದ್ದೆಗಳ ಭರ್ತಿಗಾಗಿ ಪ್ರಕಟಣೆ

ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆಯ ಸಂಜೀವಿನಿ ಯೋಜನೆಯ ಜಿಲ್ಲಾ ಪಂಚಾಯತ್ ಮೈಸೂರು ಜಿಲ್ಲೆಯ ಮುಖಾಂತರ ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದು.

ಎಂಐಎಸ್ / ಡಾಟಾ ಎಂಟ್ರಿ ಆಪರೇಟರ್ ಹುದ್ದೆಗೆ ಲಿಖಿತ ಪರೀಕ್ಷೆ ಇರುವುದಿಲ್ಲ. ಆದರೆ ಕಂಪ್ಯೂಟರ್ ಜ್ಞಾನ , ಕನ್ನಡ ಮತ್ತು ಇಂಗ್ಲೀಷ್ ಪ್ರಾತ್ಯಕ್ಷಿಕ ವಿಷಯಾಧಾರಿತ ಪರೀಕ್ಷೆಯ ದಿನಾಂಕವನ್ನು ಜಿಲ್ಲಾ ಪಂಚಾಯತ್,ಮೈಸೂರು ಪ್ರಕಟಣಾ ಫಲಕ ಹಾಗೂ ವೆಬ್‌ಸೈಟ್ http://www.mysore.nic.in/zillapanchayat.htm ನಲ್ಲಿ ಪ್ರಕಟಿಸಲಾಗುವುದು.

ಹುದ್ದೆಯ ವಿವರ ಈ ಕೆಳಕಂಡಂತಿದೆ.

ಕ್ರಸಂ	ಹುದ್ದೆಯ ಹೆಸರು	ಮಾಸಿಕ ವೇತನ	ಖಾಲಿ ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ವಯೋಮಿತಿ	ಖಾಲಿ ಹುದ್ದೆಗಳ ವಿವರ
1	ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು	ರೂ.25000/–	7	ಸ್ನಾತಕೋತ್ತರ ಪದವಿ/ಸ್ನಾತಕೋತ್ತರ ಡಿಪ್ಲೋಮಾದೊಂದಿಗೆ ಸಂಬಂಧಿಸಿದ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಕಾರ್ಯನಿರ್ವಹಣಾ ಅನುಭವ	ಗರಿಷ್ಠ 45 ವರ್ಷ	ಹೆಚ್.ಡಿ.ಕೋಟೆ–1, ಹುಣಸೂರು–1, ನಂಜನಗೂಡು–1, ತಿ.ನರಸೀಪುರ–1; ಮೈಸೂರು–1, ಕೆ.ಆರ್.ನಗರ–1 ,ಪಿರಿಯಾಪಟ್ಟಣ–1
2	ವಲಯ ಮೇಲ್ವಿಚಾರಕರು	ರೂ.15000/–	5	ಪದವಿಯೊಂದಿಗೆ ಸಂಬಂಧಿಸಿದ ಕ್ಷೇತ್ರದಲ್ಲಿ 2 ವರ್ಷಗಳ ಕಾರ್ಯನಿರ್ವಹಣಾ ಅನುಭವ	ಗರಿಷ್ಠ 35 ವರ್ಷ	ಮೈಸೂರು–1 ,ಕೆ.ಆರ್.ನಗರ–2, ಪಿರಿಯಾಪಟ್ಟಣ–2
3	ಎಂಐಎಸ್/ ಡಾಟಾ ಎಂಟ್ರಿ ಆಪರೇಟರ್	ರೂ.13000/–	3	ಯಾವುದೇ ಪದವಿಯೊಂದಿಗೆ ಸಂಬಂಧಿಸಿದ ಕ್ಷೇತ್ರದಲ್ಲಿ 1 ವರ್ಷದ ಕಾರ್ಯನಿರ್ವಹಣಾ ಅನುಭವ ಹಾಗೂ ಕಂಪ್ಯೂಟರ್ ಜ್ಞಾನ, ಕನ್ನಡ (ನುಡಿ, ಬರಹ,ಯೂನಿಕೋಡ್) ಮತ್ತು ಇಂಗ್ಲೀಷ್ ಭಾಷೆಯಲ್ಲಿ 30 wpm ಗಳ ಟೈಪಿಂಗ್ ಸ್ಪೀಡ್ ಕಡ್ಡಾಯ.	ಗರಿಷ್ಠ 35 ವರ್ಷ	ಮೈಸೂರು–1, ಕೆ.ಆರ್.ನಗರ–1, ಪಿರಿಯಾಪಟ್ಟಣ–1 .

1. ಆಸಕ್ತಿಯುಳ್ಳ ಅಭ್ಯರ್ಥಿಗಳು ಜಿಲ್ಲಾ ಪಂಚಾಯತ್,ಮೈಸೂರು ವೆಬ್‌ಸೈಟ್ http://www.mysore.nic.in/zillapanchayat.htm ನಲ್ಲಿ ಅರ್ಜಿಗಳನ್ನು ಮೇಲ್ಕಂಡ ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಂಡು ವಿವರವನ್ನು ಭರ್ತಿ ಮಾಡಿ ಸಹಿ ಮಾಡಿ ಸ್ಕ್ಯಾನ್ ಮಾಡಿದ ಅರ್ಜಿಯನ್ನು **ದಿನಾಂಕ 20.02.2018 ರ ಸಂಜೆ 05:30** ಗಂಟೆಯೊಳಗೆ **ಇ–ಮೇಲ್** ವಿಳಾಸ: dmmumys@gmail.com ವಿಳಾಸಕ್ಕೆ ಸಲ್ಲಿಸುವುದು ಅಥವಾ ಯೋಜನಾ ನಿರ್ದೇಶಕರು, ಸಂಜೀವಿನಿ ಶಾಖೆ, ಜಿಲ್ಲಾ ಪಂಚಾಯತ್ ಮೈಸೂರು ಇವರ ಕಛೇರಿಗೆ ಖುದ್ದಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.
2. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಯೋಜನಾ ನಿರ್ದೇಶಕರು, ಸಂಜೀವಿನಿ ಶಾಖೆ, ಜಿಲ್ಲಾ ಪಂಚಾಯತ್ , ಮೈಸೂರು ಇವರ ಕಛೇರಿಯಲ್ಲಿ ದಿನಾಂಕ **26.02.2018** ರಿಂದ **28.02.2018** ರವರೆಗೆ ಕಛೇರಿ ಅವಧಿಯಲ್ಲಿ HALL TICKET ಅನ್ನು ಖುದ್ದಾಗಿ ಪಡೆಯತಕ್ಕದ್ದು.
3. ಅಭ್ಯರ್ಥಿಗಳು ಜಿಲ್ಲಾ ಪಂಚಾಯತ್,ಮೈಸೂರು ವೆಬ್‌ಸೈಟ್ http://www.mysore.nic.in/zillapanchayat.htm ನಲ್ಲಿ ಪರೀಕ್ಷೆಯ ಪಠ್ಯಕ್ರಮ ಮತ್ತು ಕ್ರ.ಸಂ 1 ಮತ್ತು 2 ರ ಹುದ್ದೆಯ ಕರ್ತವ್ಯ ಮತ್ತು ಜವಾಬ್ದಾರಿಯ ವಿವರಗಳನ್ನು ವೀಕ್ಷಿಸಬಹುದು.
4. HALL TICKET ಅನ್ನು ಪಡೆಯದ ಅಥವಾ ತರದೇ ಇರುವ ಅಭ್ಯರ್ಥಿಗಳನ್ನು ಪರೀಕ್ಷೆಗೆ ಅನುಮತಿಸುವುದಿಲ್ಲ.
5. ಲಿಖಿತ ಪರೀಕ್ಷೆಯ ದಿನಾಂಕ : **04.03.2018** (ಭಾನುವಾರ) (ಕ್ರ.ಸಂ. 1 ಮತ್ತು 2 ರ ಹುದ್ದೆಗಳಿಗೆ ಮಾತ್ರ).
6. ಸಂದರ್ಶನಕ್ಕೆ ಅರ್ಹರಾಗಿರುವ ಅಭ್ಯರ್ಥಿಗಳ ಪಟ್ಟಿ ಮತ್ತು ಸಂದರ್ಶನದ ದಿನಾಂಕವನ್ನು ದಿನಾಂಕ:**10.03.2018** ರಂದು ಜಿಲ್ಲಾ ಪಂಚಾಯತ್ ನ ಪ್ರಕಟಣಾ ಫಲಕ ಮತ್ತು ಜಿಲ್ಲಾ ಪಂಚಾಯತ್ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗುವುದು.
7. ಸದರಿ ಹುದ್ದೆಗಳು ತಾತ್ಕಾಲಿಕವಾಗಿದ್ದು, ಖಾಯಮಾತಿಗೆ ಅವಕಾಶವಿರುವುದಿಲ್ಲ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್, ಮೈಸೂರು.

ಹೆಚ್ಚಿನ ಮಾಹಿತಿಗಾಗಿ: ಸಂಜೀವಿನಿ ಶಾಖೆ, (NRLM) ಜಿಲ್ಲಾ ಪಂಚಾಯತ್ ಮೈಸೂರು ಇವರನ್ನು ಸಂಪರ್ಕಿಸುವುದು.

www.kpscvaani.com